## ಅಪೂರ್ವ ಕಾಗದ

ಕಳೆದ ವಾರ ಕೊನೆಗೊಂಡ 'ಬೆಂಗಳೂರು ಚಿತ್ರೋತ್ಸವ'ದಲ್ಲಿ ಸಹೃದಯರ ಗಮನಸೆಳೆದ ಕನ್ನಡ ಚಿತ್ರಗಳಲ್ಲೊಂದು 'ಉಪ್ಪಿನ ಕಾಗದ'. ಬಿ. ಸುರೇಶ್ ನಿರ್ದೇಶನದ ಈ ಸಿನಿಮಾ ತನ್ನ ಕಥನ ಹಾಗೂ ದೃಶ್ಯಸೌಂದರ್ಯದಿಂದ ಗಮನಸೆಳೆದ ಸಿನಿಮಾ. ಸಿನಿಮಾದ ಮತ್ತೊಂದು ಆಕರ್ಷಣೆ ನಾಯಕಿ ಅಪೂರ್ವ ಭಾರದ್ವಾಜ್.

ಅಪ್ಪನನ್ನು ಹುಡುಕಿಕೊಂಡು ಅಲೆಯುವ ಹಾಗೂ ಅಪ್ಪ ದೊರೆತ ನಂತರವೂ ತನ್ನ ಪ್ರಶ್ನೆಗಳಿಗೆ ಉತ್ತರ ದೊರೆಯದ ತರುಣಿಯ ಪಾತ್ರ ಅಪೂರ್ವ ಅವರದು. ಅನಾಥಪ್ರಜ್ಞೆಯ ಜೊತೆಗೆ ಪ್ರೀತಿಗಾಗಿ ಹಂಬಲಿಸುವ ಹಾಗೂ ಆ ಪ್ರೀತಿಯನ್ನು ಕೊಡದ ಅಪ್ಪನ ಬಗ್ಗೆ ಸ್ಫೋಟಿಸುವ ಪಾತ್ರದಲ್ಲಿ ಅಪೂರ್ವ ಅವರ ನಟನೆ ಗಮನಸೆಳೆಯುವಂತಿದೆ. ಹೆಪ್ಪುಗಟ್ಟಿದ ಸಂಬಂಧಗಳಿಗೆ ಮರಳಿ ಜೀವ ತುಂಬುವ ಪಾತ್ರ ಅವರದು.  ನಾಗಾಭರಣ ಅವರಂಥ ಹಿರಿಯ ನಿರ್ದೇಶಕರ ಎದುರು ಕಾಣಿಸಿಕೊಂಡೂ ಸೈ ಅನ್ನಿಸಿಕೊಳ್ಳುವ ನಟನೆ ಅವರದು.

ಅಪೂರ್ವ ಈಗಾಗಲೇ ಕಿರುತೆರೆಯಲ್ಲಿ ಪಳಗಿದವರು. 'ಉಪ್ಪಿನ ಕಾಗದ' ಅವರ ನಟನೆಯ ಮೊದಲ ಸಿನಿಮಾ. ಸುರೇಶ್‌ರಂಥ ಪ್ರಯೋಗಶೀಲ ನಿರ್ದೇಶಕರೊಂದಿಗಿನ ಅನುಭವ ಅವರಿಗೆ ಖುಷಿಕೊಟ್ಟಿದೆ. ಕಣ್ಣುಗಳ ಮೂಲಕ ಭಾವನೆಗಳನ್ನು ವ್ಯಕ್ತಪಡಿಸುವ ಪಠ್ಯದ ಕಲಿಕೆಯ ರೂಪದಲ್ಲಿ ಮೊದಲ ಸಿನಿಮಾ ಅವರಿಗೆ ಒದಗಿಬಂದಿದೆ. ಮಂಡ್ಯ ರಮೇಶ್ ತಾರಾಗಣದಲ್ಲಿರುವ ಮತ್ತೊಬ್ಬ ಪ್ರಮುಖ ಕಲಾವಿದ.

ಸುರೇಶ್‌ರ ಸಿನಿಮಾಗಳು ಸಮಕಾಲೀನ ಸಂಗತಿಗಳನ್ನು ಚರ್ಚಿಸುವ ಮೂಲಕ ಗಮನಸೆಳೆಯುತ್ತವೆ. ಆದರೆ, ಈ ಚಿತ್ರದಲ್ಲಿ ಸುರೇಶ್ ಸಂಬಂಧಗಳ ಶೋಧದ ಬಗ್ಗೆ ಗಮನಹರಿಸಿರುವುದು ಕುತೂಹಲಕರವಾಗಿದೆ. ಅಂತರಂಗದ ಸೌಂದರ್ಯ ಹಾಗೂ ಪ್ರಾಕೃತಿಕ ಸೌಂದರ್ಯವನ್ನು ಅವರು ಮುಖಾಮುಖಿ ಆಗಿಸಿರುವ ಕ್ರಮ ಕೂಡ ವಿಶಿಷ್ಟವಾಗಿದೆ.





## ಪ್ರೇಮದ ಹೊಸ ಅಂಕ

ಪ್ರೀತಿ–ಪ್ರೇಮ ಸಿನಿಮಾ ಕಥನಗಳ ಅವಿಭಾಜ್ಯ ಅಂಗ. ಆದರೆ, ಗಾಂಧಿನಗರದಲ್ಲೊಂದು ಸಿನಿಮಾ ತನ್ನ ಶೀರ್ಷಿಕೆಯಲ್ಲೇ 'ಪ್ರೀತಿ ಪ್ರೇಮ'ವನ್ನು ಅಂಟಿಸಿಕೊಂಡಿದೆ. ಕಾಶಿ ವಿಶ್ವನಾಥ್ ನಿರ್ದೇಶನದ 'ಪ್ರೀತಿ ಪ್ರೇಮ' ಯುವಪ್ರತಿಭೆಗಳ ಉತ್ಸಾಹದಲ್ಲಿ ರೂಪುಗೊಂಡಿರುವ ಸಿನಿಮಾ.

ಕೃಷ್ಣ ಚೈತನ್ಯ ಈ ಸಿನಿಮಾ ನಿರ್ಮಾಣದ ಜೊತೆಗೆ ನಾಯಕನಾಗಿಯೂ ನಟಿಸಿದ್ದಾರೆ. ಮೂಲತಃ ಆಂಧ್ರದವರಾದ ಅವರು ತಮ್ಮ ಚೊಚ್ಚಿಲ ಸಿನಿಮಾದ ಪ್ರಯೋಗಶಾಲೆಯನ್ನಾಗಿ ಕನ್ನಡ ಚಿತ್ರರಂಗವನ್ನು ಆರಿಸಿಕೊಂಡಿದ್ದಾರೆ. ನಾಯಕ – ನಾಯಕಿಯ ನಡುವಣ ಪ್ರೇಮದ ಹುಡುಕಾಟ ಚಿತ್ರದ ಕಥೆ. ಕೌಟುಂಬಿಕ ಕಥನದ ಜೊತೆಗೆ ಹಾಸ್ಯವೂ ಮಿಳಿತವಾಗಿರುವ ತಮ್ಮ ಸಿನಿಮಾ ಕನ್ನಡಿಗರಿಗೆ ಇಷ್ಟವಾಗುವ ನಿರೀಕ್ಷೆ ಅವರದು. ಹೊಸ ಪ್ರತಿಭೆಗಳನ್ನು ಉತ್ತೇಜಿಸುವ ಕನ್ನಡಿಗರ ವಿಶೇಷ ಗುಣವೂ ಅವರನ್ನು ಗಾಂಧಿನಗರದತ್ತ ಸೆಳೆದಿದೆ.

ಕೊಡಗಿನ ಹುಡುಗಿ ನಿಧಿ ಕುಶಾಲಪ್ಪ ಚಿತ್ರದ ನಾಯಕಿ. ಈ ಮುನ್ನ 'ನನ್ ಲವ್ ಟ್ರ್ಯಾಕ್' ಎನ್ನುವ ಚಿತ್ರದಲ್ಲಿ ನಟಿಸಿದ್ದ ನಿಧಿ ಅವರಿಗಿದು ಎರಡನೇ ಸಿನಿಮಾ. ಕಾಲೇಜು ವಿದ್ಯಾರ್ಥಿನಿಯ ಪಾತ್ರದಲ್ಲಿ ನಟಿಸಿರುವುದು ಅವರಿಗೆ ಖುಷಿ ಕೊಟ್ಟಿದೆ. ಇತ್ತೀಚೆಗಷ್ಟೇ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ.

■ ರಘು